

# ಕಗ್ಗೊರಲೆ

– ಡಾ. ಸತ್ಯ

ತುಳಸಿಯ ತಂಗಿಯಂತೆ ಇರುವ ಈ ಕರಿಕೊರಲ್ ಅರ್ಥಾತ್ ಕರಿತೆನೆಯ ಗಿಡಕ್ಕೆ ಕಗ್ಗೊರಲೆ ಎಂಬ ಹೆಸರು ಹಳೆ ಮೈಸೂರಿನಲ್ಲಿ ಪ್ರಚಲಿತ. ಕರಾವಳಿ ಜಿಲ್ಲೆಯ ಹೆಸರು ಕಾಮಕಸ್ತೂರಿ. ತುಳಸಿ ಹಿಂದುಗಳಿಗೆ ಹೇಗೆ ಪೂಜನೀಯವೋ ಅದೇ ಪ್ರಕಾರ ಈ ಸುಗಂಧಿ ಗಿಡ ಯುರೋಪಿಯನ್ ದೇಶಗಳ ಪೂಜಾ ಸ್ಥಾನಗಳಲ್ಲಿ ನೆಡಲಾಗುತ್ತಿತ್ತಂತೆ. ಹಾಗಾಗಿ ಇದನ್ನು ಬೆಸಿಲಿಕ(ಮಂದಿರ) ಎಂದೇ ಕರೆದರು. ಲ್ಯಾಟಿನ್ ಹೆಸರು ಒಸಿಮಂ(ಈ ಮೂಲ ತುಳಸಿಯದೇ)ಬೆಸಿಲಿಕಂ.

ಹದಿನಾಲ್ಕನೆಯ ಶತಮಾನದ  ಕನ್ನಡ ನಾಡಿನ ಒಬ್ಬ ವಿಷವೈದ್ಯ ಮಂಗರಸ ಎಂಬಾತ ಕಗ್ಗೊರಲೆಯ ಗುಣ ಕರ್ಮ ಬಳಕೆ ಹಾಗೂ ವಿಷ ನಿವಾರಕ ಗುಣ ಹಾಡಿ ಹೊಗಳಿದ. ಹಾಗಾಗಿ ಅಂದಿನಿಂದಲೂ ಈ ಗಿಡ ಶ್ರೀ ಸಾಮಾನ್ಯರಿಗೆ ತಿಳಿದಿತ್ತು. ನೆಟ್ಟು ಬೆಳೆಸುವ ವಿಧಾನ ಸಹ ಚಿರ ಪರಿಚಿತ.

ಕುಂಡದಲ್ಲಿ  ಅಥವ ಹಸನು ನೆಲದಲ್ಲಿಒಣ ತೆನೆಯ ಕರಿ ಬೀಜ ಉದುರಿಸಿದರೆ ಸಾಕು. ಬೇಗನೆ ಹೊಸ ಸಸಿ ಮೊಳೆಯುತ್ತದೆ. ಹೆಚ್ಚೇನು ಆರೈಕೆ ಬೇಡದ ಗಿಡವಿದು.  ತುಳಸಿಯಂತೆ ಸುಮಾರು ಮೂರಡಿ ತನಕ ಬೆಳೆದೀತು. ಬೀಜ ಮತ್ತು ಎಳೆ ಎಲೆಗೆ ಮದ್ದಿನ ಬಳಕೆ ಇದೆ.

ಎಲೆಯ ಸುಗಂಧಿ ತೈಲಾಂಶಕ್ಕೆ ಕರ್ಪೂರದ ವಾಸನೆ. ಅದೇ ತೆರನ ಬಳಕೆ. ಬರ್ಬರಿಕಾ ಎಂಬ ಸಂಸ್ಕೃತ ಹೆಸರಿನಡಿ ಪರಿಚಿತ. ಎಲೆ ರಸಕ್ಕೆ ಜೇನು ಕೂಡಿಸಿ ಕುಡಿಸಿ ಕೆಮ್ಮು ಪರಿಹರಿಸುವರು. ಅದರ ಬಳಕೆ ಮೂತ್ರ ಕೋಶದ ಕಲ್ಲು ನಿವಾರಣೆಗೆ ಸಹ ಉಪಯುಕ್ತ.ಬೀಜಕ್ಕೆ ಹಲವು ಹತ್ತು ಬಳಕೆ ಇದೆ. ನೀರಿಗೆ ಹಾಕಿ ನೋಡಿ. ಅದು ಉಬ್ಬುವ ಗುಣ ಉಳ್ಳದ್ದು. ಬೇಸಿಗೆ ಬೇಗೆ ನೀಗುವ ಷರಬತ್‌ಗೆ ಈ ಬೀಜ ಯೋಗ್ಯ. ಅದು ಕಾಮವರ್ಧಕ ಎಂದೇ ಪ್ರಸಿದ್ಧ. ಕಣ್ಣುರಿ, ಉಷ್ಣ ತೊಂದರೆ ರೋಗಿಗೆ ಕಾಮಕಸ್ತೂರಿ ಬೀಜ ನೆನೆಸಿದ ನೀರಿನಿಂದ ಕಣ್ಣು ತೊಳೆವರು. ಮೈಕೈ ಊತವಿದ್ದರೆ ಬೀಜದ ಬಿಸಿನೀರಿನ ಪಾನಕ ಸೇವಿಸಿ. ಕಿವಿ, ಹಲ್ಲಿನ ತೊಂದರೆಗೆ ಎಲೆ ರಸ ಬಾಹ್ಯ ಅಭ್ಯಂತರ ಬಳಕೆ ಇದೆ. ಬೀಜದ ಪುಡಿ ಉದುರಿಸಿದರೆ ಹಳೆ ಗಾಯ ಒಣಗೀತು. ಎಲೆರಸ ಹಚ್ಚಿ ತಲೆ ಹುಣ್ಣು, ಚರ್ಮದ ಒಣತುರಿಕೆ,ಕಜ್ಜಿ ಗುಣ ಪಡಿಸುವರು. ಇಲಿ,ಹಾವಿನ ಕಡಿತಕ್ಕೆ ಎಲೆ ರಸ ಬಳಕೆಗೆ ಸಾವಿರ ವರ್ಷದ ಇತಿಹಾಸ.

ಕಗ್ಗೊರಲೆ ಸಸಿ ಕಂಡ ವಿದೇಶೀ ಮಿತ್ರರನೇಕರು "ಓ ಇದು  ಸಿಹಿ ಬೇಸಿಲ್" ಎಂದು ಉದ್ಗರಿಸಿದ ಮೇಲೆ ನನಗೆ ಇದು ಆಹಾರೋಪಯೋಗಿ ಗಿಡ ಎಂದು ತಿಳಿಯಿತು. ಅವರು ಖಾದ್ಯ ತಯಾರಿಕೆಯ ಅಂತಿಮ ಹಂತದ ಸಲಾಡ್ ಡ್ರೆಸಿಂಗ್‌ಗೆ  ಇದರ ಎಲೆ ಬಳಸುವರಂತೆ. ಹಾಗಾಗಿ ಕಗ್ಗೊರಲೆ ಎಲೆತಂಬುಳಿ ಅಥವಾ ಇನ್ನಿತರ ರೂಪದ ಆಹಾರ ಬಳಕೆಗೆ ಅಡ್ಡಿಯಿಲ್ಲ. ಇಂಥ ಬಹೂಪಯೋಗಿ ಗಿಡ ನಿಮ್ಮ ಮನೆಯ ಅಂಗಳದಲ್ಲಿದೆಯೆ?

***